ಹಿಡಿದು ರಾಷ್ಟ್ರಪ್ರಶಸ್ತಿ, ಅಂತರರಾಷ್ಟ್ರೀಯ ಪ್ರದರ್ಶನಗಳನ್ನು ಕಾಣಬಹುದಾದ ಸಿನಿಮಾವನ್ನು ನಿರ್ಮಿಸಬಹುದು. ಹೀಗೆ ಗುಲ್ವಾಡಿಯವರಂತೆ ಬೆಂಗಳೂರಿನಿಂದ ದೂರ ಕುಳಿತು ಸಿನೆಮಾ ನಿರ್ಮಾಣ ಮಾಡಿ ಸಿದ್ಧಿ ಹಾಗೂ ಪ್ರಸಿದ್ಧಿ ಪಡೆದವರು ಕರ್ನಾಟಕದಲ್ಲಿ ಹಲವರಿದ್ದಾರೆ. ಮುರುಕು ಸೈಕಲಿನಲ್ಲಿ ಬೀದಿ ಮನೆಗಳನ್ನು ಸುತ್ತುತ್ತ ಮೂಲೆಗುಂಪಾದ ಹಳೆ ತಗಡು ಕಬ್ಬಿಣ, ಓದಿಓದಿ ಸಾಕೆನಿಸಿಕೊಂಡ ಪೇಪರುಗಳ ರಾಶಿಯನ್ನು ತೂಕದಲ್ಲಿ ಪಡೆದು ಸಂಗ್ರಹಿಸಿ ಮಾರಿ ಜೀವನ ನಡೆಸುತ್ತಿದ್ದ ಗುಲ್ವಾಡಿಯವರು ಇದೀಗ ಚಿತ್ರ ನಿರ್ಮಾಪಕ–ನಿರ್ದೇಶಕ ಎನ್ನುವ ಹೊಸ ಗುರುತನ್ನು ಪಡೆದಿದ್ದಾರೆ.

ಗಾಂಧಿನಗರದ ಆಡಂಬರ, ಅದ್ದೂರಿತನದ ಚೆನ್ನದ ಪ್ರಭಾವಳಿಯ ತಾರಾಗಣ, ಹುಚ್ಚು ಅಭಿಮಾನಿ ಬಳಗ, ಇವೆಲ್ಲವುಗಳ ಪ್ರತಿಮೆಯಾಗಿ ಚಿತ್ರಮಂದಿರಗಳ ಮುಂದೆ ವೀರೋಚಿತ ನಿಲುವಿನಲ್ಲಿ ಪ್ರತ್ಯಕ್ಷವಾಗುವ ಸಿನಿಮಾ ನಾಯಕ ನಾಯಕಿಯರ ಕಟೌಟ್‌ಗಳಿಂದ ಬಹುದೂರದಲ್ಲಿ, ಸ್ಥಾಪಿತ ಸಿನಿಮಾ ನಗರಿಯ ಗೌಜುಗದ್ದಲಗಳು ಕೇಳಿಸದಲ್ಲಿ ನಿರ್ಮಾಣಗೊಂಡ ಹಲವು ಚಿತ್ರಗಳ ಸಾಲಿಗೆ ಇದೀಗ ‘ಟ್ರಿಪಲ್ ತಲಾಕ್’ ಕೂಡ ಸೇರಿದೆ. ಇದೇ ಮಾದರಿಯಲ್ಲಿ ನಿರ್ಮಿತವಾಗಿ ಚರ್ಚೆ ಚಿಂತನೆಗಳಿಗೆ ಗ್ರಾಸವಾಗಿದ್ದ ‘ತಿಥಿ’, ‘ಜೀರ್ಜಿಂಬೆ’, ‘ದೇವರ ನಾಡಲ್ಲಿ’, ‘ರಿಸರ್ವೇಶನ್’ ಚಿತ್ರಗಳಿಗೆ ಸಿಕ್ಕ ಆಪ್ತ ಸ್ವಾಗತ ಇದೀಗ ‘ಟ್ರಿಪಲ್ ತಲಾಕ್’ಗೂ ಇಂಗ್ಲೆಂಡಿನ ಬ್ರಿಸ್ಟಲ್ ಅಲ್ಲಿ ದೊರಕಿದೆ.

ಒಂದು ಸಮುದಾಯದ ಒಳಗಿನ ಆಚರಣೆಗಳಿಗೆ, ಏಕಮುಖ ವಿಚಾರಧಾರೆಗಳಿಗೆ ಒಳಗಿಂದಲೇ ವಿಮರ್ಶೆ ಸಿಕ್ಕರೆ ಅದು ಬೀರುವ ಪ್ರಭಾವ ಪರಿಣಾಮಕಾರಿ ಇರಬಹುದು. ಚಿತ್ರಕತೆ ಬರೆದು ನಿರ್ದೇಶಿಸಿರುವ ಗುಲ್ವಾಡಿಯವರು ಈ ಸಿನಿಮಾದ ವಸ್ತುವಿನ ಮಟ್ಟಿಗೆ ಒಳಗಿನವರು ಹಾಗೂ ಹೊರಗೆ ನಿಂತು ನೋಡುವವರಿಗೆ ಒಳನೋಟವನ್ನು ಒದಗಿಸುವವರು. ಕರ್ನಾಟಕದ ಮುಸ್ಲಿಮರಲ್ಲಿ ಒಂದು ಸಮುದಾಯವಾದ ಬ್ಯಾರಿ ಕುಟುಂಬಗಳ ಬದುಕನ್ನು ದೂರ ನಿಂತು ಗುಮಾನಿಯಲ್ಲಿ ನೋಡುವವರಿಗೆ ಎಲ್ಲಿಂದಲೋ ಹರಿದುಬರುವ ಸುದ್ದಿಸಂತೆಗಳ ಖರೀದಿದಾರರಾಗಿ ಅಭಿಪ್ರಾಯ ರೂಪಿಸಿಕೊಳ್ಳುವವರಿಗೆ ತಿಳಿವಿನ ಬೆಳದಿಂಗಳನ್ನು ‘ಟ್ರಿಪಲ್ ತಲಾಕ್’ ಚಿತ್ರ ಚೆಲ್ಲಬಲ್ಲದು.

ಬೀಡಿ ಕಟ್ಟಿ ಬದುಕು ಸಾಗಿಸುವ ತಾಯಿ ಹಾಗೂ ಸುಧಾರಿತ ಸಾಮಾಜಿಕ ತಿಳಿವಳಿಕೆಯ ಬಲದಲ್ಲಿ ಶಿಕ್ಷಣ ಪಡೆಯುವ ಮಗಳು – ಇವರಿಬ್ಬರೂ ತ್ರಿವಳಿ ತಲಾಕ್‌ಗೆ ಹೇಗೆ ವಸ್ತುವಾಗಬಲ್ಲರು, ಈ ಬಗ್ಗೆ ಸುಪ್ರೀಂ ಕೋರ್ಟ್ ಆದೇಶಕ್ಕಿಂತ ಮೊದಲಿನ ಮತ್ತು ನಂತರದ ತಲಾಕ್ ಪ್ರಸಂಗಗಳು, ಕಾನೂನಿನ ಬಲವನ್ನು ಸಮರ್ಥವಾಗಿ ಬಳಸಿಕೊಳ್ಳುವ ಈ ಕಾಲದ ಮುಸ್ಲಿಂ ಮಗಳು ಮತ್ತು ‘ಆದದ್ದಾಯಿತು, ನಮ್ಮ ಹಣೆಬರಹ’ ಎಂದು ನುಂಗಿ ಮುನ್ನಡೆಯುವ ತಾಯಿ, ಹೀಗೆ ವಿರುದ್ಧ ಮನೋಧರ್ಮಗಳನ್ನು ಜೊತೆಜೊತೆಗೆ ನೋಡುಗರ ಮುಂದೆ ತಂದು ನಿಲ್ಲಿಸುತ್ತದೆ ಈ ಚಲನಚಿತ್ರ.




ಧರ್ಮಗ್ರಂಥವನ್ನು ಸರ್ವೋಚ್ಚ ಎಂದು ನಂಬುವ ಮನಸ್ಸುಗಳು ಸಾಮಾನ್ಯ ತಿಳಿವಳಿಕೆಗೆ ನಿಲುಕದ ಗ್ರಂಥದ ಸಾಲುಗಳನ್ನು ಕೆಲವು ಗುರುಗಳ ಸರಳ ಹಾಗು ತಪ್ಪು ವ್ಯಾಖ್ಯಾನದಿಂದಾಗಿ ಅಮಾನವೀಯ ಆಚರಣೆಯಾಗಿ ಪಾಲಿಸುವವರು ಮತ್ತೆ ಕುರಾನ್ ಹೇಳಿರದ ಅಂತಹ ಒಂದು ಆಚರಣೆಗೆ ಪತ್ನಿಯನ್ನು ಒಡ್ಡುವವರು ಕಾನೂನಿನ ಅಳತೆಯಲ್ಲಿ ಅಪರಾಧಿಯಾಗಿ ಶಿಕ್ಷೆಗೆ ಗುರಿಯಾಗುವುದು ಚಿತ್ರದ ಕಥಾಹಂದರ. ಇದೇ ಚಿತ್ರದಲ್ಲಿ ಬರುವ ಇನ್ನೋರ್ವ ತಾಯಿ ತನ್ನ ಮಗಳು ‘ತ್ರಿವಳಿ ತಲಾಕ್’ ಮೂಲಕ ಪರಿತ್ಯಕ್ತಳಾದದ್ದಕ್ಕೆ ಅವಳ ಗಂಡನಿಗೇನೋ ಕಾನೂನು ಶಿಕ್ಷೆ ವಿಧಿಸಬಹುದು ಆದರೆ ಮಗಳ ಬಾಳ್ವೆಯನ್ನು ಹಿಂತಿರುಗಿಸುವವರು ಯಾರು ಎನ್ನುವ ಪಾರಮಾರ್ಥಿಕ ಪ್ರಶ್ನೆಯನ್ನು ನ್ಯಾಯಾಲಯದ ಮುಂದಿಡುವುದು ಶಿಕ್ಷೆಗಳ ಅಸಹಾಯಕತೆಯ ಬಗ್ಗೆ ಯೋಚಿಸುವಂತೆ ಮಾಡುತ್ತದೆ.

ಗ್ರಂಥ–ಶಾಸ್ತ್ರಗಳ ನೆಪದಲ್ಲಿ ಗುರು, ಸ್ವಾಮಿ, ಸಂತರ ಹೆಸರಲ್ಲಿ ಮನುಷ್ಯ ಜೀವನದ ಮೂಲಸೆಲೆಗಳನ್ನು ಅಳಿಸಿ ಹಾದಿತಪ್ಪಿಸುವವರಿಂದ ಮುಗ್ಧ ಅಸಹಾಯಕ ಮನಸ್ಸುಗಳನ್ನು ಯಾವುದೇ ಸಮುದಾಯ–ಪದ್ಧತಿಗಳಲ್ಲಿ ತಪ್ಪಿಸುವುದು ಹೇಗೆ? ಕಾನೂನು ಕಠಿಣ ಶಿಕ್ಷೆ ಕೊಡಬಹುದು. ಆದರೆ, ಶಿಕ್ಷೆಯಿಂದ ಎಷ್ಟು ಅಮಾನವೀಯ ನಡವಳಿಕೆಗಳು ಕ್ರೌರ್ಯಗಳು, ದೌರ್ಜನ್ಯಗಳು ಕಡಿಮೆ ಆಗಿವೆ ಅಥವಾ ಅಂತಹ ಪರಿಸ್ಥಿತಿ ಒಳಗಾದವರ ಬದುಕಿನ ಸುಸ್ಥಿತಿಯನ್ನು ಮರಳಿಸುವ ಬಗೆ ಹೇಗೆ? ಇವು ‘ಟ್ರಿಪಲ್ ತಲಾಕ್’ ನೋಡಿದ ನಂತರವೂ ಏಳುವ ಉಳಿಯುವ ಪ್ರಶ್ನೆಗಳು. ಪ್ರಶ್ನೆಗಳನ್ನು ಪ್ರೇಕ್ಷಕರ ಮನಸ್ಸಲ್ಲಿ ತೂರಿಸಿಬಿಡುವುದು ಪರಿಣಾಮಕಾರಿ ಚಲನಚಿತ್ರಗಳ ಸಲ್ಲಕ್ಷಣ. ಇಂತಹ ಪ್ರಶ್ನೆಗಳನ್ನು ಚಿಂತನೆಗಳನ್ನು ಪ್ರೇಕ್ಷಕರ ಮನಸ್ಸಲ್ಲಿ ಹಚ್ಚಿದರೆ ಒಂದು ಸಿನಿಮಾ ಆರ್ಥಿಕವಾಗಿ ಗೆದ್ದಿದೆಯೋ ಇಲ್ಲವೋ ನಿರ್ಧರಿತ ಆಗುವುದಿಲ್ಲವಾದರೂ ಕತೆಯೊಂದು ಮನಸ್ಸುಗಳನ್ನು ಮುಟ್ಟಿದ ತಟ್ಟಿದ ತೃಪ್ತಿಯನ್ನು ಸಿನಿಮಾ ತಂಡಕ್ಕೆ ಕೊಡಬಹುದು.

ಎರಡು ತಾಸುಗಳ ಸಿನಿಮಾ ಪ್ರದರ್ಶನ ಮುಗಿದಿದ್ದರೂ, ‘ಟ್ರಿಪಲ್ ತಲಾಕ್’ ನೋಡಿದ ಮೇಲೆ ಹುಟ್ಟಿದ ಪ್ರಶ್ನೆಗಳು ಇಲ್ಲೇ ಓಡಾಡಿಕೊಂಡಿವೆ. ಒಂದು ಸಿನಿಮಾಕತೆಯ ಪ್ರದರ್ಶನದ ನಂತರ ತನ್ನ ಪರದೆಯ ಮೇಲೆ ಇನ್ನೆಲ್ಲಿಯದೋ ಇನ್ನೊಂದು ಸಿನಿಮಾ ಪ್ರದರ್ಶಿಸುವ ತರಾತುರಿಯ ನಿರ್ಲಿಪ್ತ ಮನಸ್ಥಿತಿಯ ಯಾವುದೇ ಊರಿನ ಸಿನಿಮಾ ಟಾಕೀಸಿನಂತಹ ಬ್ರಿಸ್ಟಲ್‌ನ ಸಿನಿಮಾ ಮಂದಿರ ಮತ್ತೊಂದು ಚಲನಚಿತ್ರವನ್ನು ತನ್ನ ಪರದೆಯ ಮೇಲೆ ಮೂಡಿಸಿದೆ. ■